ದಿನಾಂಕಃ 12-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ</u>- ವಾದಿ ಪರವಾಗಿ ಶ್ರೀ ಪಿ.ಡಿ.ಟಿ. ವಕೀಲರಿಂದಃ-

ದಾವಾ ಜಮೀನುಗಳು ದಾಸಪ್ಪನಪಾಳ್ಯದಲ್ಲಿವೆ. ದಾಸಪ್ಪನಪಾಳ್ಯ ನಮ್ಮ ಊರಿನಿಂದ 5 ಕಿ.ಮೀ. ದೂರದಲ್ಲಿದೆ. ದಾಸಪ್ಪನಪಾಳ್ಯದಲ್ಲಿ ನನಗೆ ಸೇರಿದ ಯಾವುದೇ ಜಮೀನುಗಳು ಇರುವುದಿಲ್ಲ. ವಾದಿಯರ ತಂದೆಯನ್ನು ನಾನು ನೋಡಿರುವುದಿಲ್ಲ. ವಾದಿಗಳು ನನ್ನ ಸಂಬಂಧಿಕರು. ನಾನು ಕುರುಬ ಜನಾಂಗಕ್ಕೆ ಸೇರಿರುತ್ತೇನೆ. ವಾದಿಯರು ಸಹ ಕುರುಬ ಜನಾಂಗದವರು. ವಾದಿಯವರು ಗೊಲ್ಲ ಸಮುದಾಯಕ್ಕೆ ಸೇರಿದವರು ಎಂದರೆ ಸರಿ. ವಾದಿಗಳು ಈ ದಾವೆಯನ್ನು ಒಟ್ಟು ಮೂರು ಆಸ್ತಿಗಳ ಮೇಲೆ ಸಲ್ಲಿಸಿರುತ್ತಾರೆ. ಆ ಮೂರು ಆಸ್ತಿಗಳು ಮೂಲತಃ ವಾದಿಯರ ತಂದೆಗೆ ಸೇರಿದ ಆಸ್ತಿಗಳಾಗಿರುತ್ತವೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ವಾದಿಯರ ವಕೀಲರೇ ಬರೆಸಿರುತ್ತಾರೆ. ದಾವಾ ಆಸ್ತಿಗಳಲ್ಲಿ ಸುಮಾರು 45 ವರ್ಷಗಳ ಹಿಂದೆಯೇ ವಿಭಾಗ ಆಗಿರುತ್ತದೆ. ನನಗೆ ಈಗ 76 ವರ್ಷ ವಯಸ್ಸಾಗಿರುತ್ತದೆ. ದಾವಾ ಆಸ್ತಿಗಳಲ್ಲಿ ವಿಭಾಗ ಆದ ಸಮಯದಲ್ಲಿ ನಾನೂ ಸಹ ಆ ಸ್ಥಳದಲ್ಲಿ ಹಾಜರಿದ್ದೆನು. 1 ನೇ ವಾದಿ ನನ್ನ ನಂಟರಾಗಿದ್ದು, ಆ ವಿಭಾಗದ ಸಮಯದಲ್ಲಿ ನನ್ನನ್ನು ಕರೆಸಿಕೊಂಡರು. ನಾನು ಮತ್ತು 1 ನೇ ವಾದಿ ಹೆಣ್ಣು ಕೊಡುವುದು ಮತ್ತು ತೆಗೆದುಕೊಳ್ಳುವುದರ ಮೂಲಕ ಸಂಬಂಧಿಕರು. ನಮ್ಮ ಹೆಣ್ಣು

ಮಕ್ಕಳನ್ನು 1 ನೇ ವಾದಿ ಕುಟುಂಬಕ್ಕೆ ಮದುವೆ ಮಾಡಿಕೊಟ್ಟಿರುವುದಿಲ್ಲ.

ಆ ವಿಭಾಗವಾದ ಸಮಯದಲ್ಲಿ ಸುಮಾರು 7 ರಿಂದ 8 ಜನರಿದ್ದರು, ಅವರ ಹೆಸರುಗಳು ನನಗೆ ಗೊತ್ತಿಲ್ಲ. ಆ ವಿಭಾಗದಲ್ಲಿ 4 ಆಸ್ತಿಗಳನ್ನು 4 ವಿಭಾಗ ಮಾಡಿಕೊಳ್ಳಲಾಯಿತು. ಈ ರೀತಿ ವಿಭಾಗವಾದ ಬಗ್ಗೆ ಪತ್ರ ಬರವಣಿಗೆ ಮಾಡಿರುವುದಿಲ್ಲ. ಅದೇ ರೀತಿ ಯಾರಿಗೆ ಯಾವ ಆಸ್ತಿಗಳು ಹೋದವು ಎಂಬುದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಸರ್ವೇ ನಂಬರ್ ಗಳು, ವಿಸ್ತೀರ್ಣ ಮತ್ತು ಚಕ್ಕುಬಂಧಿ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳನ್ನು ನಾನು ನೋಡಿಲ್ಲ, 2 ನೇ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ